

# ಬೇಸಿಗೆ ರಜಾ ಕಲಿಕೆಯ ಮಜಾ

ಮಕ್ಕಳು ಬೇಸಿಗೆ ರಜೆಯನ್ನು ಮಜವಾಗಿ, ಜೊತೆಗೆ ಸೃಜನಶೀಲವಾಗಿಯೂ ಕಳೆಯಲು ಪೋಷಕರು ಏನೇನು ಮಾಡಬಹುದು?

■ ಸವಿತಾ ಮಾಧವ ಶಾಸ್ತ್ರಿ

ಮಕ್ಕಳಿಗೆ ಬೇಸಿಗೆ ರಜೆ ಪ್ರಾರಂಭವಾಯಿತು. ತಾಯಂದಿರಿಗೆ ಮಕ್ಕಳನ್ನು ಶಾಲೆಗೆ ಕಳಿಸುವ, ಅವರ ಟಿಫಿನ್ ಬಾಕ್ಸ್ ಪ್ಯಾಕ್ ಮಾಡುವ ಕೆಲಸ ತಪ್ಪಿತಲ್ಲ ಎಂಬ ನೆಮ್ಮದಿ ಒಂದೆಡೆಯಾದರೆ, ಮೂರು ಹೊತ್ತು ಮನೆಯಲ್ಲೇ ಇರುವ ಮಕ್ಕಳು ಮೊಬೈಲ್ ಮತ್ತು ಟೀವಿಗೆ ಇನ್ನಷ್ಟು ಅಡಿಕ್ಟ್ ಆಗುತ್ತಾರೆ ಎನ್ನುವ ಆತಂಕ ಇನ್ನೊಂದೆಡೆ.

ಆದರೆ ಮಕ್ಕಳಿಗೆ ಈ ರಜೆಯನ್ನು ಬೇಸರ ಬರದಂತೆ ಕಳೆಯಲು ಯಾವುದಾದರೊಂದು ಹವ್ಯಾಸದಲ್ಲಿ ತೊಡಗುವಂತೆ ಮಾಡಬೇಕು. ಈ ಬೇಸಿಗೆ ರಜೆಯಲ್ಲಿ ಮಕ್ಕಳು ಹೆತ್ತವರ ಮಾರ್ಗದರ್ಶನದಲ್ಲಿ ಹೊಸತೇನಾದರೂ ಕಲಿಯುವಂತಾಗಲಿ. ಮಕ್ಕಳು ಏನೇನು ಮಾಡಬಹುದು ಸ್ವಲ್ಪ ಯೋಚಿಸಿ ನೋಡಿ.

- ಹತ್ತಿರದಲ್ಲಿ ಹವ್ಯಾಸದ ತರಗತಿಗಳಿದ್ದರೆ ಸಂಗೀತ, ನೃತ್ಯ, ವಾದ್ಯ, ಚೆಸ್, ಈಜು, ಕರಾಟೆ, ಯಕ್ಷಗಾನ ಹೀಗೆ ಯಾವುದಾದರೂ ಒಂದು ಅಥವಾ ಎರಡು ತರಗತಿಗಳಿಗೆ ಮಕ್ಕಳನ್ನು ಸೇರಿಸಬಹುದು.
- ಈಗ ದೇಶ, ವಿದೇಶದ ವಿವಿಧ ಭಾಷೆಗಳನ್ನು ಮನೆಯಲ್ಲಿ ಕುಳಿತೇ ಕಲಿಯಲು ಸಾಕಷ್ಟು ಅವಕಾಶಗಳಿವೆ. ಆನ್‌ಲೈನ್‌ನಲ್ಲಿ ಸೀಮಿತ ಅವಧಿಯಲ್ಲಿ ಮಕ್ಕಳು ತಮ್ಮಿಷ್ಟದ ಭಾಷೆ ಕಲಿಯಬಹುದು. ಹಾಗೆಯೇ ಕಂಪ್ಯೂಟರ್ ಕೋರ್ಸ್, ಕೋಡಿಂಗ್ ಮುಂತಾದವುಗಳನ್ನು ಕೂಡ ಕಲಿಯಬಹುದು. ಇದರಿಂದ ರಜೆಯನ್ನು ವ್ಯರ್ಥ ಮಾಡದೆ ಜ್ಞಾನಾರ್ಜನೆಗೆ ಮತ್ತು ಹೊಸ ಕಲಿಕೆಗೆ ಬಳಸಿಕೊಂಡಂತಾಗುತ್ತದೆ.
- ಮಕ್ಕಳಿಗೆ ಸುಲಭದಲ್ಲಿ ಕಲಿಸಿಕೊಡಬಹುದಾದ ಮಕ್ಕಳ ನಾಟಕಗಳ ಸ್ಕ್ರಿಪ್ಟ್ ತಯಾರಿಸಿ ನೆರೆಹೊರೆಯ ಐದಾರು ಮಕ್ಕಳನ್ನು ಸೇರಿಸಿ ಪುಟ್ಟ ನಾಟಕ ತರಬೇತಿ ನೀಡಬಹುದು. ಮೂಕಾಭಿನಯ, ಏಕಪಾತ್ರಾಭಿನಯ ಮುಂತಾದವುಗಳನ್ನು ಹೇಳಿಕೊಡಬಹುದು. ಪೋಷಕರು ಮನಸ್ಸು ಮಾಡಿದರೆ ತಾವಿರುವ ವಠಾರ ಅಥವಾ ಅಪಾರ್ಟ್ಮೆಂಟ್ ಪಾರ್ಟಿ ಹಾಲ್‌ನಲ್ಲಿ ಪುಟ್ಟ ಪ್ರದರ್ಶನ ಏರ್ಪಡಿಸಬಹುದು. ಇದರಿಂದ ಅವರ ಪ್ರತಿಭಾ ಪ್ರದರ್ಶನಕ್ಕೆ ಒಂದು ಅವಕಾಶ ಒದಗಿಸಿದಂತಾಗುತ್ತದೆ. ಮಕ್ಕಳಿಗೂ ಹೊಸತನ್ನು ಮಾಡಿದ ಖುಷಿ ಜೊತೆಯಾಗುತ್ತದೆ.
- ಈ ಬೇಸಿಗೆಯ ಬೇಸರ ಕಳೆಯಲು ಮಕ್ಕಳಿಗೆ ವೈವಿಧ್ಯಮಯ ವಸ್ತುಗಳ ಸಂಗ್ರಹಣೆ ಮಾಡಲು ಪ್ರೇರೇಪಿಸಿ. ನಾಣ್ಯ, ಅಂಚೆಚೀಟಿ, ವಿವಿಧ ಆಕಾರಗಳ ಕಲ್ಲುಗಳನ್ನು ಸಂಗ್ರಹಿಸುವಂತೆ ಮಕ್ಕಳನ್ನು ಉತ್ತೇಜಿಸಬಹುದು. ಹೊಳೆ ಅಥವಾ ಸಮುದ್ರದ ಬಳಿ ಮಕ್ಕಳನ್ನು ಕರೆದುಕೊಂಡು ಹೋದರೆ ಅಲ್ಲಿ ಸಿಗುವ ವಿವಿಧ ಬಗೆಯ ಕಪ್ಪೆ ಚಿಪ್ಪು, ಶಂಖಗಳನ್ನು ಕೂಡ ಸಂಗ್ರಹಿಸಬಹುದು. ಹೀಗೆ ಮಕ್ಕಳು ತಾವು ಸಂಗ್ರಹಿಸಿ ಇಟ್ಟಿರುವುದನ್ನು ತಮ್ಮ ಸ್ನೇಹಿತರೊಂದಿಗೆ ವಿನಿಮಯ ಮಾಡಿಕೊಳ್ಳಬಹುದು. ವಿವಿಧ ವಿನ್ಯಾಸಗಳ ಎಲೆಗಳನ್ನು, ಬಣ್ಣ ಬಣ್ಣದ ಹೂವುಗಳ ಎಸಳುಗಳನ್ನು ಒಣಗಿಸಿ ಒಂದು ಪುಸ್ತಕದಲ್ಲಿ ಅಂಟಿಸಿ ಸಂಗ್ರಹಿಸಿಡಬಹುದು. ಹಾಗೆ ಮನೆಗೆ ತಂದ ಕೆಲವು ಹಣ್ಣು, ತರಕಾರಿಗಳ ಬೀಜಗಳನ್ನು ಒಣಗಿಸಿ ಸಂಗ್ರಹಿಸುವ ಹವ್ಯಾಸ ಕೂಡ ರೂಢಿಸಿಕೊಳ್ಳಬಹುದು. ಇದನ್ನು ಮಳೆಗಾಲದಲ್ಲಿ ಸ್ಥಳಾವಕಾಶವಿದ್ದರೆ ನೆಟ್ಟು ಬೆಳೆಸಬಹುದು.
- ಈ ಇಂಟರ್ನೆಟ್ ಯುಗದಲ್ಲಿ ಎಲ್ಲರೂ ಶುಭಾಶಯ ಕೋರಲು ವಾಟ್ಸ್‌ಆ್ಯಪ್ ಮೊರೆ ಹೋಗುತ್ತಾರೆ. ಆದರೂ ಒಂದು ಕಾಲದಲ್ಲಿ ಬಹುಬೇಡಿಕೆಯಲ್ಲಿದ್ದ ಗ್ರೀಟಿಂಗ್ ಕಾರ್ಡ್‌ಗಳನ್ನು ಮಕ್ಕಳೇ ತಯಾರಿಸಿ ಅದನ್ನು ಆಪ್ತರಿಗೆ ಕೊಟ್ಟರೆ ಅದು ಬಹುಕಾಲ ನೆನಪಿನಲ್ಲುಳಿಯುವ ವಿಶೇಷ ಉಡುಗೊರೆ ಎನಿಸುತ್ತದೆ. ಕ್ರಾಫ್ಟ್ ಪೇಪರ್, ಬಣ್ಣದ ಕಾರ್ಡ್ ಅಥವಾ ಹಳೆಯ ಆಮಂತ್ರಣ ಪತ್ರಿಕೆಗಳನ್ನು ಅಂದವಾಗಿ ಕತ್ತರಿಸಿ ಬಣ್ಣದ ಕಾಗದ ಅಂಟಿಸಿ ಗ್ಲಿಟರ್ ಅಥವಾ ಸ್ಕೆಚ್ ಪೆನ್ನಿನಿಂದ ಚಿಕ್ಕ ಪುಟ್ಟ ಚಿತ್ರ ಅಥವಾ ಕಾರ್ಟೂನ್ ರಚಿಸಿ ಏನಾದರೂ ಸಂದೇಶ ಬರೆದರೆ ಶುಭಾಶಯ ಪತ್ರಗಳು ತಯಾರಾಗುತ್ತವೆ. ಇದನ್ನು ತಯಾರಿಸುವುದನ್ನು ಮಕ್ಕಳಿಗೆ ಸುಲಭವಾಗಿ ಕಲಿಸಬಹುದು. ಈ ರಜೆಯಲ್ಲಿ ತಯಾರಿಸಿದ ಗ್ರೀಟಿಂಗ್ ಕಾರ್ಡ್‌ಗಳನ್ನು ಶಿಕ್ಷಕರಿಗೆ ಶಿಕ್ಷಕರ ದಿನಾಚರಣೆಯ ಶುಭಾಶಯಗಳನ್ನು ತಿಳಿಸಲು, ಸ್ನೇಹಿತರಿಗೆ ಅವರ ಜನುಮದಿನದಂದು ಕೊಡಲು ಬಳಸಬಹುದು. ಶುಭಾಶಯ ಕಾರ್ಡ್ ಕೊಟ್ಟು ಶುಭ ಕೋರಿದರೆ ಅವರಿಗೂ ಸಂತೋಷ, ಮಕ್ಕಳಿಗೂ ಖುಷಿ.
- ಮಕ್ಕಳಿಗೆ ಮನೆಯಲ್ಲೇ ದೊರಕುವ ಸುಲಭದ ವಸ್ತುಗಳನ್ನು ಬಳಸಿ ವಾಲ್ ಹ್ಯಾಂಗಿಂಗ್, ಬೊಂಬೆ ಮುಂತಾದ ಕರಕುಶಲ ವಸ್ತುಗಳನ್ನು ತಯಾರಿಸಲು ಹೇಳಿಕೊಡಿ. ಹಳೆಯ ಬಟ್ಟೆ ತುಂಡುಗಳು, ಬಣ್ಣದ ಕಾಗದ, ಬೆಂಕಿ ಕಡ್ಡಿ, ಪಿಸ್ತಾ ಸಿಪ್ಪೆಗಳು, ಕೆಲವು ಮಣಿಗಳನ್ನು ಬಳಸಿ, ಲೇಸ್‌ಗಳನ್ನು ಅಂಟಿಸಿ ವಿವಿಧ ವಿನ್ಯಾಸಗಳ ಚಿತ್ತಾರ ರಚಿಸಿ ವಾಲ್ ಹ್ಯಾಂಗಿಂಗ್ ಅಥವಾ ಪೆನ್ ಸ್ಟ್ಯಾಂಡ್ ತಯಾರಿಸಬಹುದು. ಮಕ್ಕಳಿಗೆ ಮಾರ್ಗದರ್ಶನ ನೀಡಿದರೆ ಅವರ ಸೃಜನಶೀಲತೆಯೂ ಹೆಚ್ಚುತ್ತದೆ. ನೀವೂ ಮಕ್ಕಳಿಗೆ ಸಮಯ ಕೊಟ್ಟಂತೆ ಆಗುತ್ತದೆ. ಜೊತೆಗೆ ಸ್ಕ್ರೀನ್ ಟೈಂ ಕೂಡ ಕಡಿಮೆ ಮಾಡಿದಂತಾಗುತ್ತದೆ. ಏನಂತೀರಿ?

■